ಇ) ೭ ಲಕ್ಷ ಗ್ಯಾಲನ್ ಸಾಮರ್ಥ್ಯದ ಭೂಮಟ್ಟದ ಜಲಸಂಗ್ರಹಾಗಾರವನ್ನು ಕಟ್ಟುವ ಕೆಲಸ ಹಾಗೂ ವಿರು ಕೊಳವೆ ಮಾರ್ಗಗಳನ್ನು ಹಾಕುವ ಕೆಲಸ ಪ್ರಗತಿಯಲ್ಲಿದೆ. ಭೂವಿವಾದದಿಂದಾಗಿ ನಿಂತು ಹೋಗಿದ್ದ ಕನೆಕ್ಟಿಂಗ್ ಪೈಪ್ ಕೆಲಸ ಮತ್ತು ಜಾಕ್‌ವೆಲ್ ಕೆಲಸಗಳಿಗೆ ಪುನಃ ಟೆಂಡರ್ ಕರೆಯಲಾಗಿದ್ದು ಗುತ್ತಿಗೆದಾರರನ್ನು ನೇಮಿಸಿ ಇಷ್ಟರಲ್ಲೇ ಕೆಲಸವನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ಯೋಜನೆಯಿಂದ ಡಿಸೆಂಬರ್ ೧೯೮೮ರಲ್ಲಿ ನಗರಕ್ಕೆ ನೀರನ್ನು ಪೂರೈಸಲು ಯೋಜಿಸಲಾಗಿದೆ.

ಜನತಾ ಮನೆಗಳ ನಿರ್ಮಾಣ ಕುರಿತು

೪೨೧. ಶ್ರೀ ಯಂ. ಭೂಪತಿ, (ಸಂಡೂರು).—ಮಾನ್ಯ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ೧೯೮೬-೮೭ ಹಾಗೂ ೧೯೮೭-೮೮ರಲ್ಲಿ ಜನತಾ ಮನೆಗಳ ನಿರ್ಮಾಣದ ಬಗ್ಗೆ ಹೊಂದಿದ ಗುರಿ ಎಷ್ಟು?

ಆ) ೧೯೮೬-೮೭ರಲ್ಲಿ ಸದರಿ ಗುರಿಯನ್ನು ಮುಟ್ಟಲಾಗಿದೆಯೇ, (ಜಿಲ್ಲಾವಾರು ಗುರಿ ಮತ್ತು ಸಾಧನೆಯ ವಿವರಗಳನ್ನೊದಗಿಸುವುದು).

ಇ) ಒಂದು ಮನೆ ಕಟ್ಟಲು ೪,೫೦೦ರೂ.ಗಳು ಸಾಕಾಗುವುದಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಈ) ಆಂಧ್ರ ಪ್ರದೇಶದಲ್ಲಿ ಜನತಾ ಮನೆ ನಿರ್ಮಾಣಕ್ಕೆ ಖರ್ಚು ಮಾಡುವ ಹಣ ಕರ್ನಾಟಕಕ್ಕಿಂತಲೂ ಹೆಚ್ಚಿದೆಯೆಂಬುದು ನಿಜವೇ. ಹಾಗಿದ್ದಲ್ಲಿ ಎಷ್ಟು ವ್ಯತ್ಯಾಸವಿದೆ.

ಉ) ರಾಜ್ಯದಲ್ಲಿ ಒಂದು ಮನೆಗೆ ಕನಿಷ್ಟ ೧೦,೦೦೦ ರೂ.ಗಳನ್ನಾದರೂ ನಿಗಧಿಪಡಿಸಲು ಸರ್ಕಾರದವರು ಯೋಚಿಸುವರೆ?

ಶ್ರೀ ಮಹಮ್ಮದ್ ಮೊಯಿನುದ್ದೀನ್ (ವಸತಿ ರಾಜ್ಯ ಸಚಿವರು).—

ಅ)

	೧೯೮೬-೮೭	೧೯೮೭-೮೮
ಪ್ರಾಯೋಗಿಕ ಕಡಿಮೆ ವೆಚ್ಚದ ಮನೆಗಳು	೨೩,೦೦೫ + ೨೩,೪೫೫ =	೪೬,೪೬೦
ಹುಡ್ಕೋ ನೆರವಿನ ಜನತಾ ವಸತಿ ಮನೆಗಳು	೩೦,೦೦೦ + ೪೦,೩೦೫ =	೯೦,೩೦೫

ಆ) ಇಲ್ಲ

ಇ) ಬಂದಿದೆ, ಮನೆ ಕಟ್ಟುವ ವೆಚ್ಚವನ್ನು ರೂ. ೬,೦೦೦ಕ್ಕೆ ಹೆಚ್ಚಿಸಲು ಪರಿಶೀಲಿಸಲಾಗುತ್ತಿದೆ.

ಈ) ಮಾಹಿತಿಯು ಲಭ್ಯವಿರುವುದಿಲ್ಲ.

ಉ) ಇಲ್ಲ.

ಗ್ರಾಮ ಪಂಚಾಯಿತಿ ಆಡಳಿತಾಧಿಕಾರಿಯ ಬಗ್ಗೆ

೪೯೯. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಮತ್ತು ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗ್ರಾಮ ಪಂಚಾಯಿತಿಗಳಿಗೆ ಆಡಳಿತಾಧಿಕಾರಿಗಳನ್ನು ಯಾವಾಗ ನೇಮಿಸಲಾಗಿತ್ತು. ಹಾಗೂ ಅವರ ಅಧಿಕಾರದ ಅವಧಿ ಯಾವಾಗ ಮುಗಿಯಿತು.